ಎಂಬತ್ತು ಮೀರಿದ ವಯಸ್ಸು. ಮೇಲಿಂದ ಈಗ ಹಾರ್ಟ್ ಸಮಸ್ಯೆ ಅಂದರೆ ಹೇಳೊದು ಕಷ್ಟ. ಮಕ್ಕಳಿಗೆ ತಿಳಿಸಿಬಿಡೋದು ಒಳ್ಳೇದು; ಅಷ್ಟು ದೂರದಿಂದ ಬರಬೇಕಲ್ವಾ? ಅನಿಸುತ್ತಿತ್ತು. ಆದರೆ ಯಾರೂ ಮಾಮಿ ಹತ್ತಿರ ಬಾಯಿ ಬಿಡಲಿಲ್ಲ.

ಬೆಳಿಗ್ಗೆ ಸ್ಪೆಷಲ್‌ವಾರ್ಡಿನಲ್ಲಿ ದೇವಕಿಮಾಮಿಯೊಬ್ಬರೆ ಇದ್ದರು. 'ಮಕ್ಕಳಿಗೆ ತಿಳಿಸಿದ್ಯಾ?' ಕೇಳಿದರು ಮೆನನ್.

'ಇಲ್ಲ... ಯಾಕೆ ಕೇಳ್ತಿದೀರಿ? ಮತ್ತೇನಾದ್ರು ಆಗ್ತಿದೆಯಾ? ಮುಚ್ಚಿಡದೇ ಹೇಳಿ... ಡಾಕ್ಟರನ್ನ ಕರೆಯಲಾ?' ಅಳತೊಡಗಿದರು.

'ಇಲ್ವೇ. ಈಗ್ಲೇ ಏನೂ ತಿಳಿಸೋದು ಬೇಡ ಅಂತ. ನಾನು ಅಲ್ಲಿ ಕಾಯಿಲೆ ಬಿದ್ದಾಗ್ಲೇ ಅಷ್ಟೊಂದು ಖರ್ಚಾಗಿದೆ. ಈಗ ಪ್ರಯಾಣದ ಖರ್ಚು, ಮೇಲಿಂದ ರಜೆ ಮುಂತಾದ ಸಮಸ್ಯೆ. ಅಲ್ಲಾ... ಅವರು ಗಾಬರಿಪಟ್ಟುಕೊಂಡು ಓಡಿ ಬಂದಾಗ ನನಗೇನೂ ಆಗಿಲ್ಲ ಅಂತಾದ್ರೆ ಅವರಿಗೇನನಿಸ್ಬಹುದು ಅಲ್ವಾ...'

ಹತ್ತುಗಂಟೆ ಹೊತ್ತಿಗೆ ಅಪಾರ್ಟ್‌ಮೆಂಟಿನ ಆರೇಳುಜನ ಬಂದರು. ರಮಣ ರಾವ್ ದಂಪತಿ, ರಮೇಶ, ಪಾಟೀಲ ದಂಪತಿ ಒಳಬಂದರು. ಟ್ರಾಫಿಕ್ಕನ್ನು ನೆನಸಿಕೊಂಡ ಮಾಮಿಗೆ ಇವರೆಲ್ಲ ಎಂಟುಗಂಟೆಗೇ ಹೊರಟಿರಬೇಕು ಅನಿಸಿತು. ಅದೂ ಇದೂ ಮಾತಾಡುತ್ತಿದ್ದಂತೆ ಡಾಕ್ಟರು ನರ್ಸೊಡನೆ ಒಳಬಂದರು. ಚಾರ್ಟನ್ನ ಪರೀಕ್ಷಿಸಿ ಅಲ್ಲೇ ಇಟ್ಟು ಕಾತರದಲ್ಲಿದ್ದ ಎಲ್ಲರ ಮುಖ ನೋಡಿ ಮಾಮಿಯತ್ತ ತಿರುಗಿ ಹೇಳಿದರು 'ಇವರಿಗೆ ಹಾರ್ಟಿನ ಯಾವ ಸಮಸ್ಯೆಯಿಲ್ಲ, ಕಿಡ್ನಿ ಲಿವರ್ ಸಹ ಸರಿಯಾಗೇ ಇದೆ. ಬೀಪಿ ಶುಗರು ಅದು ಇದ್ದದ್ದೇ, ಬಟ್ ಕಂಟ್ರೋಲಬಲ್...'

'ಮತ್ತೆ ಈ ಎದೆನೋವು?'

'ಗ್ಯಾಸಿನ ಸಮಸ್ಯೆ ಒಮ್ಮೊಮ್ಮೆ ಎದೆನೋವಿನ ಅನುಭವ ಮಾಡುತ್ತೆ. ವಯಸ್ಸು ಅಲ್ವಾ? ಅದಕ್ಕೆ ನೋವು ತೀವ್ರ ಅನಿಸಿದೆ. ಅದಕ್ಕೆ ಔಷಧ ಬರಕೊಡತೀನಿ, ನಾಳೆ ಬೆಳಿಗ್ಗೆ ಡಿಸ್‌ಚಾರ್ಜ್ ಮಾಡೋಣ. ಆರುತಿಂಗಳು ಬಿಟ್ಟು ಮತ್ತೆ ಪರೀಕ್ಷೆ ಮಾಡಿಸಿಕೊಳ್ಳಿ.' ಮುಗುಳ್ನಕ್ಕು ವಿಷ್ ಮಾಡಿ ಹೋದರು.

ಮೆನನ್ ಮೊಳಕೈ ಊರಿ ಎದ್ದುಕುಳಿತರು. ಟೀವಿ ರಿಮೋಟ್ ತೆಗೆದುಕೊಂಡು ಅಲ್ಲಿದ್ದವರತ್ತ ಮುಗುಳ್ನಕ್ಕರು.

## ಬನವಾಸಿ ವೆಂಕಟೇಶ ದೀಕ್ಷಿತ್

ಉತ್ತರ ಕನ್ನಡ ಜಿಲ್ಲೆಯ ಬನವಾಸಿಯವರಾದ ವೆಂಕಟೇಶ ದೀಕ್ಷಿತ, ಸುಮಾರು 150ಕ್ಕೂ ಹೆಚ್ಚು ಕತೆಗಳನ್ನು ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಬೆಂಗಳೆ ಮತ್ತು ಶಿರಸಿಯಲ್ಲಿ ವಿದ್ಯಾಭ್ಯಾಸ. ಬಿ.ಎಸ್ಸಿ. ಪದವಿ ಪಡೆದಿರುವ ಅವರು ಅಂಚೆ ಇಲಾಖೆಯಲ್ಲಿ ಕಲಬುರ್ಗಿಯಲ್ಲಿ, ತಮ್ಮ ವೃತ್ತಿಜೀವನವನ್ನು ಆರಂಭಿಸಿದರು. ಅಲ್ಲಿಂದ ಭಾರತೀಯ ಸೇನೆಯಲ್ಲಿ ಸೇರಿ, ವಾರಂಟ್ ಆಫೀಸರಾಗಿ ಕಾಶ್ಮೀರದ ಬಾರಾಮುಲ್ಲಾ, ಕುಪ್ವಾಡಾ, ಶ್ರೀನಗರ, ನಗ್ರೋಟ ಮತ್ತು ನವದೆಹಲಿ, ನಾಗಪುರಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಸೇನೆಯ ಸೇವೆಯ ಬಳಿಕ ದೂರಸಂಪರ್ಕ ಇಲಾಖೆಯಲ್ಲಿ ಕಿರಿಯ ಲೇಖಾಧಿಕಾರಿಯಾಗಿ, ಮುಖ್ಯ ಲೆಕ್ಕಾಧಿಕಾರಿಯಾಗಿ, ಉಪಮಹಾ ಪ್ರಬಂಧಕರ ವೇತನಶ್ರೇಣಿಯಲ್ಲಿ ನಿವೃತ್ತರಾಗಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿರುವ ಲೇಖಕರ ಪ್ರಕಟಿತ ಕಥಾ ಸಂಕಲನ 'ಕಾವಡಿ'.